## ನೋವು ಬಂದಿದೆ

ಬೆಳಗಿನ ಕಾಫಿ ಹೀರುತ್ತಾ ಪೇಪರ್ ನೋಡುತ್ತಿದ್ದ ನಮ್ಮನೆಯವರು, 'ಲೇ... ನೋಡ್ಬಾಯಿಲ್ಲಿ ನೋವು ಬಂದಿದೇ...' ಅಂದ್ರು.

'ನನ್ಗೆ ಕಾಣುತ್ಯೇ? ಅಲ್ಲೇ ಐಯೋಡೆಕ್ಸ್ ಇದೆ ಹಚ್ಕೊಳಿ' ಎಂದು ಅಡುಗೆ ಮನೆಯಿಂದಲೇ ಕೂಗಿದೆ.

'ಅಯ್ಯೋ ಅದಲ್ವೇ... ನೋವು ಏನೋ ತಂದಿದೆ ನೋಡ್ಬಾಯಿಲ್ಲೀ' ಅಂದ್ರು. ಸಿಡುಕುತ್ತಲೇ ಬಂದೆ. ನೋಡಿದ್ರೆ ಪಕ್ಕದಮನೆ ಮಗು ನವ್ಯ ಕೈಯಲ್ಲಿ ಸ್ವಲ್ಪ ತರಕಾರಿ ಹಿಡ್ಕೊಂಡು ನಿಂತಿತ್ತು. ನಾನು ಇವರ ಮೇಲೆ ರೇಗಿದೆ. 'ಅಯ್ಯೋ, ಅವ್ರ್ ಮನೇಲಿ ಅವ್ಳಿಗೆ ಪ್ರೀತಿಗೆ ನೋವೂಂತ್ಲೇ ಕರಿಯೋದು' ಎಂದು ನನ್ನ ಬಾಯನ್ನೇ ಮುಚ್ಚಿಸಬೇಕೇ...

**'ಸುಮಾ ಕಳಸಾಪುರ'**





ಚಿತ್ರಗಳು: ಗಣೇಶ ಆಚಾರ್ಯ

## ಹಾಫ್ ಟಿಕೆಟ್

ಸುಮಾರು 20 ವರ್ಷಗಳ ಹಿಂದಿನ ಘಟನೆ. ನಮ್ಮ ಕುಟುಂಬ ಮತ್ತು ನಮ್ಮ ಸೋದರತ್ತೆಯ ಕುಟುಂಬ ಮನೆದೇವರಿಗೆಂದು ಹೋಗಿ, ಬೆಂಗಳೂರಿನ ಮೆಜೆಸ್ಟಿಕ್‌ನಿಂದ ಬಸ್‌ನಲ್ಲಿ ವೈಯಾಲಿಕಾವಲ್‌ಗೆ ಒಟ್ಟಿಗೆ ಬಂದೆವು. ಎಲ್ಲರ ಟಿಕೆಟನ್ನು ನಾನು ತೆಗೆದುಕೊಂಡಿದ್ದೆ. ಹಾಗೆ ಬರುವಾಗ ನನ್ನ ಸೋದರತ್ತೆಯ ಮಗಳು ಮಾತನಾಡುತ್ತಾ, 'ನನಗೆ ಫುಲ್ ಟಿಕೆಟ್ ತೆಗೆದುಕೊಂಡಿದ್ದೆಯಾ?' ಎಂದು ಪ್ರಶ್ನಿಸಿದಳು. ನಾನು ತಕ್ಷಣವೇ, 'ಇಲ್ಲ, ಇಲ್ಲ ನಿನಗೆ ಅರ್ಧ ಟಿಕೆಟನ್ನಷ್ಟೆ ತೆಗೆದುಕೊಂಡಿದ್ದು. ನನ್ನ ಹತ್ತಿರ ಹೆಚ್ಚು ಹಣವಿರಲಿಲ್ಲ' ಎಂದೆ. ಅದಕ್ಕೆ ಅವಳು, 'ನಾನು ನಮ್ಮಪ್ಪನಿಗೆ ಹೇಳಿ ಮನೆಯಲ್ಲಿ ಕೊಡಿಸುತ್ತಿದ್ದೆ. ಹಾಗೇಕೆ ಮಾಡಿದೆ?' ಎಂದಳು. ಅದಕ್ಕೆ ನಾನು 'ಮನೆಯಲ್ಲಿ ದುಡ್ಡು ಕೊಟ್ಟರೆ? ಕಂಡಕ್ಟರ್‌ಗೆ ಹೇಗೆ ಕೊಡುವುದು' ಎಂದು ಅವಳನ್ನು ರೇಗಿಸಿದೆ. ಆಗ ಅವಳು ಮುನಿಸಿಕೊಂಡು ಮನೆ ಸೇರಿದಳು. ಆಗ ಅವಳು ಒಂಬತ್ತನೇ ತರಗತಿಯಲ್ಲಿ ಓದುತ್ತಿದ್ದಳು. ನಾನು ಅವಳಿಗೆ ಪೂರ್ತಿ ಟಿಕೆಟು ಕೊಂಡಿದ್ದು ಬೇರೆಮಾತು. ಅವಳು ಪ್ರಶ್ನಿಸಿದ್ದರಿಂದ ಹಾಗೆ ಹೇಳಿದ್ದೆ. ಈಗ ಅವಳಿಗೆ ಮದುವೆಯಾಗಿ ಎರಡು ಮಕ್ಕಳಾದರೂ 'ಹಾಫ್ ಟಿಕೆಟ್' ಎಂದೇ ಕಿಚಾಯಿಸುತ್ತೇನೆ.

**ಅನಂತ ಪದ್ಮನಾಭ ಎಚ್.ಎಂ.**